KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-416/2022-23/ 371 Date: 7 JUL 2022

## ಸುತ್ತೋಲೆ

ವಿಷಯ: 2022–23ನೇ ಸಾಲಿನ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಎಲ್ಲ ಪದವಿ ತರಗತಿಗಳ 1ನೇ ಸೆಮಿಸ್ಟರ್‌ಗೆ SEC ವಿಷಯವಾದ Digital Fluencyಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಬೋಧಿಸಲು ನೇಮಕಗೊಂಡ ನೊಡಲ್ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಿದ ಕುರಿತು.

ಉಲ್ಲೇಖ: 1. ಕಚೇರಿ ಸುತ್ತೋಲೆ ಸಂ. KU/Aca(S&T)/SSL-394A/2022-23/273, ದಿ. 22.06.2022.
2. ಇ–ಮೇಲ್ ಮುಖಾಂತರ ಸಂಪರ್ಕಿಸಿದ ದಿನಾಂಕ 27.06.2022.
3. ಕಚೇರಿ ಸುತ್ತೋಲೆ ಸಂ. KU/Aca(S&T)/SSL-416/2022-23/452 ದಿ. 01.07.2022.
4. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 06-07-2022

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖ 01ರ ಪ್ರಕಾರ 2022–23ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಪದವಿ ತರಗತಿಗಳಿಗೆ B.Sc. (ಕಂಪ್ಯೂಟರ್ ಸೈನ್ಸ್) ಮತ್ತು B.C.A ಪದವಿಗಳನ್ನು ಹೊರತುಪಡಿಸಿ ಇತರ ಎಲ್ಲಾ ಪದವಿಗಳ 1ನೇ ಸೆಮಿಸ್ಟರ್‌ಗೆ SEC ವಿಷಯವಾದ Digital Fluencyನ್ನು ಆನ್‌ಲೈನ್ ಮುಖಾಂತರ ಕಡ್ಡಾಯವಾಗಿ ಬೋಧಿಸಲು ಕ್ರಮಕೈಗೊಳ್ಳಬೇಕೆಂದು ನಿರ್ದೇಶಿಸುತ್ತಾ, ಉಲ್ಲೇಖ 02 ಮತ್ತು 03ರ ಪ್ರಕಾರ ನೊಡಲ್ ಅಧಿಕಾರಿಗಳನ್ನು ನೇಮಿಸಲು ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಯಪಡಿಸಲಾಗಿದೆ.

ಮುಂದುವರೆದು, ಈ ಮೇಲಿನಂತೆ ನೇಮಕಗೊಂಡ ಸಂಬಂಧಪಟ್ಟ ಸದರಿ ನೊಡಲ್ ಅಧಿಕಾರಿಗಳಿಗೆ ಮತ್ತು ಮಹಾವಿದ್ಯಾಲಯಗಳ ಪ್ರಾಚಾರ್ಯರು / ಅವರ ಪ್ರತಿನಿಧಿಗಳಿಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಮತ್ತು NASSCOM, ಬೆಂಗಳೂರು ಇವರು ಸಂಯುಕ್ತವಾಗಿ ಒಂದು ದಿನದ ಕಾರ್ಯಾಗಾರವನ್ನು ಈ ಕೆಳಗಿನಂತೆ ನಿಗದಿಪಡಿಸಿರುತ್ತಾರೆ:

| ಅ.ನಂ. | ಜಿಲ್ಲೆ | ದಿನಾಂಕ | ಸಮಯ | ಸ್ಥಳ |
|---|---|---|---|---|
| 1 | ಧಾರವಾಡ ಮತ್ತು ಗದಗ ಪ್ರತಿನಿಧಿಗಳಿಗೆ | 22.07.2022 (ಶುಕ್ರವಾರ) | 10.30 ರಿಂದ 2.00ರ ವರೆಗೆ | ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ |
| 2 | ಹಾವೇರಿ ಮತ್ತು ಉತ್ತರ ಕನ್ನಡ ಪ್ರತಿನಿಧಿಗಳಿಗೆ | 23.07.2022 (ಶನಿವಾರ) | 10.30 ರಿಂದ 2.00ರ ವರೆಗೆ | ಎಂ.ಇ.ಎಸ್. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಶಿರಸಿ |

ಸದರಿ ಕಾರ್ಯಾಗಾರವು ಕಡ್ಡಾಯವಾಗಿರುವುದರಿಂದ ಈ ಮೇಲಿನಂತೆ ತಲಾ ಇಬ್ಬರಂತೆ ಎಲ್ಲ ಮಹಾವಿದ್ಯಾಲಯಗಳ ಪ್ರತಿನಿಧಿಗಳು ಕಡ್ಡಾಯವಾಗಿ ಹಾಜರಾಗಬೇಕೆಂದು ಈ ಮೂಲಕ ತಿಳಿಸಲಾಗಿದೆ. ಗೈರು ಹಾಜರಾದಲ್ಲಿ ತಮ್ಮ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು Digital Fluencyನ್ನು ಕಲಿಯಲು ಸಾಧ್ಯವಾಗುವುದಿಲ್ಲ. ಗೈರು ಹಾಜರಾದಲ್ಲಿ ಮುಂದಿನ ಅಡಚಣೆಗಳಿಗೆ ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಹೊಣೆಗಾರರೆಂದು ಈ ಮೂಲಕ ತಿಳಿಯಪಡಿಸಿದೆ.

ಪು.ತಿ.ನೋ.

ಮುಂದುವರೆದು, ಸದರಿ ಕಾರ್ಯಾಗಾರಕ್ಕೆ ಹಾಜರಾಗಲು ಕ.ವಿ.ವಿ.ಯಿಂದ ಯಾವುದೇ ದಿನ ಭತ್ಯೆ, ಪ್ರಯಾಣ ಭತ್ಯೆ ಅಥವಾ ಸಂಭಾವನೆಯನ್ನು ನೀಡಲಾಗುವುದಿಲ್ಲ. ಹೆಚ್ಚಿನ ವಿವರಕ್ಕಾಗಿ ಡಾ. ಎಸ್.ಎಂ.ತುವಾರ, ಮುಖ್ಯ ನೊಡಲ್ ಅಧಿಕಾರಿಗಳು, KUD NASSCOM ಘಟಕ, ಇವರನ್ನು ಮಿಂಚಂಚೆ ಮೂಲಕ (**sec@kud.ac.in**) ಸಂಪರ್ಕಿಸಬಹುದು.

ಕುಲಸಚಿವರು

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.
2. ಶ್ರೀ ದಿನೇಶಕುಮಾರ ಪಾಣಿಗ್ರಾಹಿ, ಸ್ಥಳೀಯ ಮುಖಂಡರು (Regional Lead), Sector Skills Council, NASSCOM ಬೆಂಗಳೂರು.
3. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಪ್ರಾಚಾರ್ಯರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರ ಮಾಹಿತಿಗಾಗಿ ಹಾಗೂ ಕಾರ್ಯಾಗಾರ ಜರುಗಿಸಲು ಸದರಿ ದಿನಾಂಕದಂದು ಸೂಕ್ತ ಏರ್ಪಾಡು ಮಾಡುವುದು.
5. ಪ್ರಾಚಾರ್ಯರು, ಎಂ.ಇ.ಎಸ್. ಕಲಾ / ವಿಜ್ಞಾನ ಮಹಾವಿದ್ಯಾಲಯ, ಶಿರಸಿ ಇವರ ಮಾಹಿತಿಗಾಗಿ ಹಾಗೂ ಕಾರ್ಯಾಗಾರ ಜರುಗಿಸಲು ಸದರಿ ದಿನಾಂಕದಂದು ಸೂಕ್ತ ಏರ್ಪಾಡು ಮಾಡುವುದು.

ಪ್ರತಿ:

1. ನಿರ್ದೇಶಕರು, ಕಾಲೇಜು ಅಭಿವೃದ್ಧಿ ವಿಭಾಗ, ಕ.ವಿ.ವಿ. ಧಾರವಾಡ.
2. ನೊಡಲ್ ಅಧಿಕಾರಿಗಳು, UUCMS ಘಟಕ ಕ.ವಿ.ವಿ. ಧಾರವಾಡ.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಕ.ವಿ.ವಿ. ಅಂತರ್ಜಾಲ ಮುಖಾಂತರ ಬಿತ್ತರಿಸಲು ಕ್ರಮವಹಿಸುವುದು.